
## ನಕ್ಷತ್ರ ಪಟ




## ಧನಂಜಯ ಕುಂಬ್ಳೆ

ಕಲೆ: ಸಂತೋಷ್ ಸಸಿಹಿತ್ಲು

# ಮಿಳಿ ಮಿಳಿ ಮಳ್ಳಿ

ಅಯ್ಯಡ ಈ ಇಲಿ
ಮಿಳಿ ಮಿಳಿ ಮಳ್ಳಿ ಪಿಳಿ ಪಿಳಿ ಕಣ್ಣು
ಉದ್ದದ ಮೂತಿ ಕಾಲಡಿ ನೆಕ್ಕಲು
ಅಯ್ಯಯ್ಯೋ ಕಿಳಿಕಿಳಿ ಕಿಳಿಕಿಳಿ

ಎದ್ದರೆ ಸಾಕು ಸರಸರ ಓಟ
ಎಲ್ಲಿ ಹೋದಳು ಗಾಂಧಾರಿ
ಹಿಡಿಯುಷ್ಟಿರುವ ಪುಟ್ಟ ದೇಹಕೆ
ಅಲಸಂಡೆ ಬಾಲವೇ ಆಧಾರ

ತುಂಟಿ ಇವಳನು ಹಿಡಿಯಲೇ ಬೇಕು
ತಂಟೆ ಮಾಡದೇ ಸುಮ್ಮನಿರಿ
ಎಷ್ಟು ಕಾದರೂ ಕೈಗೇ ಸಿಗದೆ
ಮಾಯವಾದಳು ಮೋಹಿನಿ

ರಾತ್ರಿಯ ಹೊತ್ತು ಕರಕರ ಸದ್ದು
ಇಲ್ಲೆ ಇರುವಳು ಎಂದರಿತೆ
ಟಾರ್ಚಿನ ಬೆಳಕನು ಹಾಯಿಸಿ ನೋಡಲು
ಸೌತೆಕಾಯಿಯ ಕೊರೆದಿಹಳು

ಸರಸರ ಓಡಿ ಮೂಸುತ ಮೂಸುತ
ಬಾಳೆಹಣ್ಣನು ಎಳೆದಿಹಳು
ದಡಕ್ಕ ಬಿತ್ತು ಪೆಟ್ಟಿಗೆ ಬಾಗಿಲು
ಹೊರಬರಲಾರದೆ ಸುತ್ತಿದಳು

ಪಾಪ ಎಂದ ಅಮ್ಮನ ಮಾತಿಗೆ
ಸೊಪ್ಪು ಹಾಕದೆ ಅವನು
ಬಕೇಟು ನೀರಲಿ ಪೆಟ್ಟಿಗೆ ಮುಳುಗಿಸಿ
ಒತ್ತಿ ಹಿಡಿದನು ಗಟ್ಟಿ

ಮಾತೇ ಇಲ್ಲದ ಸುಲಭದಿ ಸಿಕ್ಕಿದ
ಆಕೆಯ ಬಾಲವ ಹಿಡಿದೆಳೆದ
ಮಕ್ಕಳು ನೋಡಿ ಕೇಕೆ ಹಾಕಲು
ಅಮ್ಮ ಗದರಿದಳು ನೋವಿಂದ